**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# Crl.Mis.No.1949/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ದಿವ್ಯ | PW-1 |
| ತಂದೆಯ /ಗಂಡನ ಹೆಸರು | : | ನವೀನ್ ಎಸ್.ಬಿ | |
| ವಯಸ್ಸು | : | 26 ವರ್ಷ | - |
| ಉದ್ಯೋಗ | : | ಗೃಹಿಣಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **29.04.2024.** |
| ವಾಸಸ್ಥಳ | : | ಸಿ ನೂರಲಕುಪ್ಪೆ ಗ್ರಾಮ | - |

**ಮುಖ್ಯ ವಿಚಾರಣೆಃ ಅರ್ಜಿದಾರರ  ಪರ ಶ್ರೀ DNP ವಕೀಲರಿಂದಃ**

ನನ್ನ ಹಾಗೂ ಎದುರುದಾರರ ವಿವಾಹ ದಿಃ 12.03.2018 ರಂದು ಸರಗೂರಿನ ಸೋಮೇಶ್ವರ ದೇವಸ್ಥಾನದಲ್ಲಿ ಹಿಂದೂ ಸಂಪ್ರದಾಯದಂತೆ ವಿವಾಹ ಆಗಿರುತ್ತದೆ. ಮದುವೆಯ ಸಮಯದಲ್ಲಿ ನಮ್ಮ ತವರುಮನೆಯಿಂದ ಎದುರುದಾರರಿಗೆ ಒಂದು ಉಂಗುರ ಮತ್ತು ಐವತ್ತು ಸಾವಿರ ಹಣವನ್ನು ಕೊಟ್ಟಿದ್ದು, ನನ್ನ ತವರು ಮನೆಯವರು ಸಾಕಷ್ಟು ಹಣ ಖರ್ಚು ಮಾಡಿ ಮದುವೆ ಮಾಡಿರುತ್ತಾರೆ. ನನ್ನ ಹಾಗೂ ಎದುರುದಾರರ ಮದುವೆಯಾದ ನಂತರ ನೇರಳೆ ಗ್ರಾಮಕ್ಕೆ ಹೋಗಿ ಇರುತ್ತೇನೆ . ವಿವಾಹ ಆದ ನಂತರ ಎದುರುದಾರರು ಒಂದು ವರ್ಷ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಂತರ ನನ್ನ ಮೇಲೆ ಅನುಮಾನ ಪಡುವುದು, ಮದ್ಯಪಾನ ಮಾಡಿ ನನಗೆ ಹೊಡಿ ಬಡಿ ಮಾಡುತ್ತಾ ಬಂದಿರುತ್ತಾರೆ. ನನ್ನ ಮತ್ತು ಎದುರುದಾರರ ವೈವಾಹಿಕ ಜೀವನದ ಫಲವಾಗಿ ಒಂದು ಗಂಡು ಮಗು ಜನಿಸಿದ್ದು, ಮಗುವಿಗೆ ಹರ್ಷ ಎಂದು ಹೆಸರಿನ್ನು ಇಟ್ಟಿರುತ್ತೇವೆ. ಅವರನ್ನು ಈ ಅರ್ಜಿಯಲ್ಲಿ 2 ನೇ ಅರ್ಜಿದಾರರನ್ನಾಗಿ ಮಾಡಿರುತ್ತೇನೆ.

ನನ್ನನ್ನು ಮತ್ತು ಮಗುವನ್ನು ಎದುರುದಾರರು ನಿರ್ಲಕ್ಷ ಮಾಡಿ ನನ್ನನ್ನು ಮತ್ತು 2 ನೇ ಅರ್ಜಿದಾರರನ್ನು ಹೊಡಿ ಬಡಿ ಮಾಡಿ ನನ್ನ ತವರು ಮನೆಗೆ ಕಳುಹಿಸಿರುತ್ತಾರೆ. ನಂತರ ಎದುರುದಾರರ ಗ್ರಾಮಸ್ಥರು ಮತ್ತು ನನ್ನ ತವರು ಮನೆಯ ಗ್ರಾಮಸ್ಥರು ಪಂಚಾಯಿತಿ ಮಾಡಿ ನನ್ನನ್ನು ಎದುರುದಾರರ ಮನೆಗೆ ಕಳುಹಿಸಿಕೊಟ್ಟಿದ್ದು ನಾನು ಹೋಗಿದ್ದು ಎರಡು ಮೂರು ದಿನ ಚೆನ್ನಾಗಿ ನೋಡಿಕೊಂಡಿದ್ದು ಪುನಃ ಕಿರುಕುಳ ನೀಡಲು ಪ್ರಾರಂಭ ಮಾಡಿರುತ್ತಾರೆ. ನಾನು ಹೊಸ ಕಾರನ್ನು ಖರೀದಿ ಮಾಡಬೇಕು ನಿನ್ನ ತವರು ಮನೆಯಿಂದ ಒಂದು ಲಕ್ಷ ಹಣ ತೆಗೆದುಕೊಂಡು ಬಾ ಎಂದು ಗಲಾಟೆ ಮಾಡಿದ್ದರು, ತದ ನಂತರ ನಾನು ಬೀಚನಹಳ್ಳಿ ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದು ಕೊಟ್ಟಿರುತ್ತೇನೆ.  ಪುನಃ ನಮ್ಮ ತವರು ಮನೆಯ ಗ್ರಾಮಸ್ಥರು ಮತ್ತು ಎದುರುದಾರರ ಗ್ರಾಮಸ್ಥರು ಎದುರುದಾರರ ಮನೆಗೆ ಕಳುಹಿಸಿಕೊಟ್ಟಿದ್ದು, ಒಂದು ತಿಂಗಳು ಮಾತ್ರ ಚೆನ್ನಾಗಿ  ನೋಡಿಕೊಂಡಿದ್ದು, ನೀನು ದುಡ್ಡನ್ನು ನಿನ್ನ ತವರು ಮನೆಯಿಂದ ತರದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಕೊಲೆ ಮಾಡಲು ಬಂದಿದ್ದರು.  ದಿಃ 10.11.2022 ರಂದು ನನ್ನನ್ನು ಮತ್ತು 2 ನೇ ಅರ್ಜಿದಾರರನ್ನು ಮನೆಯಿಂದ ಹೊರ ಹಾಕಿರುತ್ತಾರೆ.

ಅರ್ಜಿದಾರರು ಮದುವೆ ಲಗ್ನಪತ್ರಿಕೆಯನ್ನು ಹಾಜರು ಮಾಡಿದ್ದು ಲಗ್ನಪತ್ರಿಕೆಯನ್ನು **ನಿಪಿ-1** ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು **ನಿಪಿ-2** ಎಂದು ಗುರುತಿಸಲಾಯಿತು. ಫೋಟೋವನ್ನು **ನಿಪಿ-3** ಎಂದು ಗುರುತಿಸಲಾಯಿತು.

ಎದುರುದಾರರಿಗೆ ಪಿತ್ರಾರ್ಜಿತ ಆಸ್ತಿ ಇದ್ದು ಅವರ ತಂದೆಯ ಹೆಸರಿನಲ್ಲಿ 6 ಎಕರೆ ಜಮೀನು ಇರುತ್ತದೆ. ಎದುರುದಾರರ ತಂದೆಗೆ ಮೂರು ಜನ ಮಕ್ಕಳು. ಎದುರುದಾರರು ಮತ್ತು ಇನ್ನೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಜಮೀನಿನಲ್ಲಿ ಹತ್ತಿ, ರಾಗಿ, ಜೋಳ ಬೆಳೆದು ವಾರ್ಷಿಕ ಸಾಕಷ್ಟು ಹಣ ಗಳಿಸುತ್ತಾರೆ. ಮತ್ತು ಎದುರುದಾರರು ಸ್ವಂತ ಕಾರನ್ನು ಹೊಂದಿದ್ದು, ಬಾಡಿಗೆ ಹೊಡೆದು ದಿವಸಕ್ಕೆ ಎರಡರಿಂದ ಮೂರು ಸಾವಿರ ಹಣ ಗಳಿಸುತ್ತಾರೆ. ಆದ್ದರಿಂದ ನನಗೆ ಮತ್ತು 2 ನೇ ಅರ್ಜಿದಾರರ ಜೀವನಕ್ಕಾಗಿ ಮಾಸಿಕ ತಲಾ ಹತ್ತು ಸಾವಿರ ಜೀವನಾಂಶ ಕೊಡಿಸಬೇಕೆಂದು ನಾನು ನ್ಯಾಯಾಲಯದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಪಾಟೀ ಸವಾಲುಃ ಎದುರುದಾರರು ತಕರಾರು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಎದುರುದಾರರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಓ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**